" ಅರಿವೇ ಗುರು "

ಕಾಲೇಜು ಶಿಕ್ಷಣ ಇಲಾಖೆ, ತುಮಕೂರು ವಿಶ್ವವಿದ್ಯಾನಿಲಯ

ಬೆಂಗಳೂರು ತುಮಕೂರು

## ನವೋದಯ ವಿದ್ಯಾ ಸಂಸ್ಥೆ (ರಿ)

# ನವೋದಯ ಪ್ರಥಮ ದರ್ಜೆ ಕಾಲೇಜು

ನ್ಯಾಕ್ 'ಬಿ' ಮಾನ್ಯತೆ

ಚಿಕ್ಕನಾಯಕನಹಳ್ಳಿ

**2026-2027ನೇ ಸಾಲಿನ ಸಹಪಠ್ಯ ಚಟುವಟಿಕೆಗಳ**

## "ಉದ್ಘಾಟನಾ ಸಮಾರಂಭ"

ಮತ್ತು ಪ್ರಥಮ ಬಿ.ಎ.ವಿದ್ಯಾರ್ಥಿಗಳಿಗೆ

## "ಸ್ವಾಗತ ಸಮಾರಂಭ"

ಸ್ಥಳ : ಸಾ.ಶಿ.ಮ, ಸಭಾಂಗಣ, ನ.ಪ್ರ.ದ ಕಾಲೇಜು, ಚಿಕ್ಕನಾಯಕನಹಳ್ಳಿ

ದಿನಾಂಕ : **17-09-2026** ಸಮಯ : ಬೆಳಗ್ಗೆ **10-30ಕ್ಕೆ**

ಅಧ್ಯಕ್ಷತೆ : **ಶ್ರೀ ಜೆ.ಸಿ.ಮಾಧುಸ್ವಾಮಿ**
ಅಧ್ಯಕ್ಷರು, ನವೋದಯ ವಿದ್ಯಾ ಸಂಸ್ಥೆ (ರಿ)
ಮಾಜಿ ಸಚಿವರು, ಕರ್ನಾಟಕ ಸರ್ಕಾರ



ಉದ್ಘಾಟನೆ : **ಡಾ.ಎಸ್.ಶಿವಣ್ಣ ಬೆಳವಾಡಿ**
ಪ್ರಾಧ್ಯಾಪಕರು, ವಿ.ವಿ, ಕಲಾ ಕಾಲೇಜು
ತುಮಕೂರು ವಿ.ವಿ-ತುಮಕೂರು

ಮುಖ್ಯ ಅತಿಥಿಗಳು : **ಶ್ರೀ ಬಿ.ಕೆ.ಚಂದ್ರಶೇಖರ್**
ಕಾರ್ಯದರ್ಶಿ, ನವೋದಯ ವಿದ್ಯಾ ಸಂಸ್ಥೆ (ರಿ)

**ಶ್ರೀ ಎನ್.ಎನ್.ಶ್ರೀಧರ್**
ಖಜಾಂಚಿ, ನವೋದಯ ವಿದ್ಯಾ ಸಂಸ್ಥೆ (ರಿ)

ನಮ್ಮೊಂದಿಗೆ : ಆಡಳಿತ ಮಂಡಳಿಯ ನಿರ್ದೇಶಕರು ಮತ್ತು ಗೌರ್ನಿಂಗ್ ಸಮಿತಿಯ ಸದಸ್ಯರು
ನವೋದಯ ಹಿರಿಯ ವಿದ್ಯಾರ್ಥಿ ಸಂಘ ಮತ್ತು ವಿವಿಧ ಸಮಿತಿ ಸಂಚಾಲಕರು



ತಮ್ಮೆಲ್ಲರಿಗೂ ಸ್ವಾಗತ ಕೋರುವ :
ಡಾ.ರವಿಕುಮಾರ್.ಸಿ, ಪ್ರಭಾರ ಪ್ರಾಂಶುಪಾಲರು
ಮತ್ತು ಬೋಧಕ-ಬೋಧಕೇತರ ಸಿಬ್ಬಂದಿ, ಹಾಗು ವಿದ್ಯಾರ್ಥಿಗಳು



## ಸರ್ವರಿಗೂ ಸ್ವಾಗತ............

ಗಂಗು ಆರ್ಟ್ಸ್ & ಕ್ರಾಫ್ಟ್

# "ಓದು ಭವಿಷ್ಯದ ಬೆಳಕು": ಮಾಜಿ ಸಚಿವ ಮಾಧುಸ್ವಾಮಿ

'ಬೆವರ ಹನಿ' ವರದಿ

ಚಿಕ್ಕನಾಯಕನಹಳ್ಳಿ: ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಶಿಸ್ತು, ಶ್ರದ್ಧೆ ಹಾಗೂ ಏಕಾಗ್ರತೆಯಿಂದ ವಿದ್ಯಾಭ್ಯಾಸ ಮಾಡಿದರೆ ಓದು ಭವಿಷ್ಯದ ಬದುಕಿಗೆ ಬೆಳಕಾಗಲಿದೆ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಹೇಳಿದರು.

ಪಟ್ಟಣದ ನವೋದಯ ಪ್ರಥಮ ದರ್ಜೆ ಕಾಲೇಜಿನಲ್ಲಿ ನಡೆದ 2026–27ನೇ ಸಾಲಿನ ಸಹಪಠ್ಯ ಚಟುವಟಿಕೆಗಳ ಉದ್ಘಾಟನೆ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಪ್ರತಿಯೊಬ್ಬ ವಿದ್ಯಾರ್ಥಿಯಲ್ಲೂ ಪ್ರತಿಭೆ ಹಾಗೂ ಶಕ್ತಿ ಇರುತ್ತದೆ. ಅದನ್ನು ಅರಿತು ಓದಿನಲ್ಲಿ ತೊಡಗಿಸಿಕೊಂಡರೆ ಭವಿಷ್ಯವನ್ನು ಉತ್ತಮವಾಗಿ ರೂಪಿಸಿ ಕೊಳ್ಳಬಹುದು. ಕಲಾ ವಿಭಾಗದ ವಿದ್ಯಾರ್ಥಿಗಳು ಕೀಳರಿಮೆ ಬೆಳೆಸಿಕೊಳ್ಳದೆ ಭಾಷಾ ಸಂಪತ್ತನ್ನು ಹೆಚ್ಚಿಸಿಕೊಳ್ಳಬೇಕು. ಯುವ ಸಮುದಾಯ ಫ್ಯಾಷನ್‌ಗೆ ಮಾರುಹೋಗದೆ ಜೀವನದಲ್ಲಿ ಗುರಿ




ಸಾಧಿಸುವತ್ತ ಗಮನಹರಿಸಬೇಕು ಎಂದರು.

ಪುಸ್ತಕಗಳ ಓದು ಹಾಗೂ ಗ್ರಂಥಾಲಯದ ಬಳಕೆಯಿಂದ ಜ್ಞಾನವನ್ನು ಹೆಚ್ಚಿಸಿಕೊಳ್ಳಬಹುದು. ಪದವಿ ಶಿಕ್ಷಣವು ವಿದ್ಯಾರ್ಥಿಗಳಿಗೆ ಮಾನವೀಯ ಮೌಲ್ಯಗಳನ್ನು ಕಲಿಸುತ್ತದೆ. ನವೋದಯ ವಿದ್ಯಾಸಂಸ್ಥೆ ಹಲವು ವರ್ಷಗಳಿಂದ ಗ್ರಾಮೀಣ ವಿದ್ಯಾರ್ಥಿಗಳಿಗೆ ಶೈಕ್ಷಣಿಕ ಆಸರೆಯಾಗಿದ್ದು, ವಿದ್ಯಾರ್ಥಿಗಳು ಈ ಅವಕಾಶವನ್ನು ಬಳಸಿಕೊಂಡು ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ತುಮಕೂರು ವಿವಿ ಕಲಾ ಕಾಲೇಜಿನ ಪ್ರಾಧ್ಯಾಪಕ ಡಾ. ಎಸ್. ಶಿವಣ್ಣ ಬೆಳವಾಡಿ, ನವೋದಯ ವಿದ್ಯಾಸಂಸ್ಥೆ ಗ್ರಾಮೀಣ ಮಕ್ಕಳಿಗೆ ಆಸರೆಯಾಗಿದ್ದು, ಇಲ್ಲಿನ ವಿದ್ಯಾರ್ಥಿಗಳು ವಿಶ್ವವಿದ್ಯಾಲಯ ಮಟ್ಟದಲ್ಲಿ ಸಾಧನೆ ಮಾಡುತ್ತಿದ್ದಾರೆ. ಉತ್ತಮ ಗುರಿ ಸಾಧಿಸಲು ಸತತ ಪರಿಶ್ರಮ ಹಾಗೂ ಏಕಾಗ್ರತೆ ಅಗತ್ಯ. ವಿದ್ಯಾಭ್ಯಾಸದ ಜತೆಗೆ ಕ್ರೀಡೆ ಮತ್ತು ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ವಿದ್ಯಾರ್ಥಿಗಳು ತೊಡಗಿಸಿಕೊಳ್ಳಬೇಕು ಎಂದರು.

ಸಂಸ್ಥೆಯ ಕಾರ್ಯದರ್ಶಿ ಬಿ.ಕೆ. ಚಂದ್ರಶೇಖರ್ ಮಾತನಾಡಿ, ಕಾಲೇಜಿನ ವಿದ್ಯಾರ್ಥಿಗಳು ಕಳೆದ ಅವಧಿಯಲ್ಲಿ ವಿಶ್ವವಿದ್ಯಾಲಯ ಮಟ್ಟದಲ್ಲಿ ರ್‍ಯಾಂಕ್‌ಗಳನ್ನು ಗಳಿಸಿರುವುದು ಹೆಮ್ಮೆಯ ಸಂಗತಿ. ವಿದ್ಯಾರ್ಥಿಗಳ ಶೈಕ್ಷಣಿಕ ಬೆಳವಣಿಗೆಗೆ ಆಡಳಿತ ಮಂಡಳಿ ಸದಾ ಸಹಕಾರ ನೀಡಲಿದೆ ಎಂದು ಹೇಳಿದರು.

ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ರಂಗನಾಥ್ ಅವರನ್ನು ಅಭಿನಂದಿಸಲಾಯಿತು. ಕಾಲೇಜಿನ ಪ್ರಭಾರ ಪ್ರಾಂಶುಪಾಲ ಡಾ. ರವಿಕುಮಾರ್.ಸಿ ಸ್ವಾಗತಿಸಿದರು. ಇತಿಹಾಸ ವಿಭಾಗದ ಡಾ. ಶ್ರೀನಿವಾಸ್ ವಿ. ವಂದಿಸಿದರು. ಐಕ್ಯೂಎಸಿ ಸಂಯೋಜಕ ಡಾ. ಅರುಣ್ ಕುಮಾರ್.ಪಿ., ಉಪನ್ಯಾಸಕ ಸದಾನಂದ ಸ್ವಾಮಿ ಇದ್ದರು.

---

ತುಮಕೂರು

ಪ್ರಜಾಪ್ರಗತಿ

ಶುಕ್ರವಾರ 18.09.2026

## ಸಹ ಪಠ್ಯ ಚಟುವಟಿಕೆ ಉದ್ಘಾಟಿಸಿದ ಮಾಜಿ ಸಚಿವ ಜೆ.ಸಿ.ಎಂ.

# ಪದವಿ ಹಂತ ಶಿಸ್ತು, ಕಲಿಕೆಗೆ ಭವಿಷ್ಯದ ಬೆಳಕು




● ಪ್ರಜಾಪ್ರಗತಿ.ಕಾಂ

ಚಿಕ್ಕನಾಯಕನಹಳ್ಳಿ: ವಿದ್ಯಾರ್ಥಿಗಳು ಪದವಿ ಹಂತದಲ್ಲಿ ಓದನ್ನು ಅತಿ ಶಿಸ್ತು ಮತ್ತು ಅರ್ಥಪೂರ್ಣವಾಗಿ ಕಲಿತರೆ ಅದು ಭವಿಷ್ಯಕ್ಕೆ ಬೆಳಕಾಗುತ್ತದೆ ಎಂದು ಮಾಜಿ ಸಚಿವ ಜೆ.ಸಿ.ಮಾಧುಸ್ವಾಮಿ ಅಭಿಪ್ರಾಯಪಟ್ಟರು. ಅವರು ನವೋದಯ ಪ್ರಥಮ ದರ್ಜೆ ಕಾಲೇಜಿನಲ್ಲಿ 2026-27ನೆ ಸಾಲಿನ ಸಹ ಪಠ್ಯ ಚಟುವಟಿಕೆಗಳ ಉದ್ಘಾಟನೆ ಮತ್ತು ಪ್ರಥಮ ಬಿ.ಎ.ವಿದ್ಯಾರ್ಥಿಗಳ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಕಾರ್ಯಕ್ರಮ ಉದ್ಘಾಟನೆ ಮಾಡಿ ಮಾತನಾಡಿದ ತುಮಕೂರು ವಿಶ್ವವಿದ್ಯಾನಿಲಯದ ಕಲಾ ಕಾಲೇಜಿನ ಪ್ರಾಧ್ಯಾಪಕ ಡಾ.ಎಸ್. ಶಿವಣ್ಣ ಬೆಳವಾಡಿ, ಇಲ್ಲಿನ ಕಲೆ, ಸಾಂಸ್ಕೃತಿಕ ಕಾರ್ಯಕ್ರಮಗಳು ವಿಶ್ವವಿದ್ಯಾನಿಲಯದಲ್ಲಿ ಸದ್ದು ಮಾಡುತ್ತಿದೆ. ಶೈಕ್ಷಣಿಕವಾಗಿ ಉತ್ತಮ ಪರಿಸರದಲ್ಲಿ ಇರುವ ಈ ಕಾಲೇಜು ಮತ್ತಷ್ಟು ಹೊಸತನದ ಮೂಲಕ ಬೆಳೆಯಲಿ ಎಂದರು.

ಇಂದು ಸಾಹಿತ್ಯ, ಶಿಕ್ಷಣ, ರಾಜಕಾರಣ ಅತಿ ಸೂಕ್ಷ್ಮವಾಗಿದ್ದು ನಾವು ಎಚ್ಚರಿಕೆಯ ಮೂಲಕ ನಡೆಯಬೇಕು. ಸರಿ ತಪ್ಪುಗಳನ್ನು ಸರಿಯಾಗಿ ವಿಮರ್ಶೆ ಮಾಡುವ ಗುಣ ಬೆಳೆಸಿಕೊಳ್ಳಬೇಕು, ಅದು ಉತ್ತಮ ವಿದ್ಯಾರ್ಥಿಯ ಕೆಲಸ. ಒಳ್ಳೆಯ ಗುರಿ ಸಾಧಿಸಲು ಸತತವಾಗಿ ಶ್ರಮ, ಏಕಾಗ್ರತೆ ಬಹು ಮುಖ್ಯ. ಪದವಿಯಲ್ಲಿ ಓದಿನ ಜೊತೆ ಕ್ರೀಡೆ, ಸಾಂಸ್ಕೃತಿಕ ಕಲೆಗಳ ಕಡೆ ಗಮನ ಹರಿಸಿ ಎಂದರು.

ಕಾರ್ಯಕ್ರಮದಲ್ಲಿ ತುಮಕೂರು ವಿಶ್ವವಿದ್ಯಾನಿಲಯದಲ್ಲಿ ಪದವಿಯಲ್ಲಿ ಪ್ರಥಮ ರ್‍ಯಾಂಕ್ ಪಡೆದ ರಂಗನಾಥ್ ಅವರನ್ನು ಅಭಿನಂದಿಸಲಾಯಿತು. ಅಭಿನಂದನೆ ಸ್ವೀಕರಿಸಿ ಮಾತನಾಡಿದ ರಂಗನಾಥ್, ಇಲ್ಲಿನ ಉಪನ್ಯಾಸಕರು ಮತ್ತು ಪೋಷಕರ ಒತ್ತಾಸೆಯಿಂದ ಈ ಸಾಧನೆ ಸಾಧ್ಯವಾಯಿತು ಎಂದರು.

ಪ್ರಭಾರ ಪ್ರಾಂಶುಪಾಲ ಡಾ. ರವಿಕುಮಾರ್.ಸಿ. ಸ್ವಾಗತಿಸಿ, ಕುಮಾರಿ ಧನ್ಯ ನಿರೂಪಿಸಿ, ಇತಿಹಾಸ ವಿಭಾಗದ ಡಾ.ಶ್ರೀನಿವಾಸ್ ವಿ. ವಂದಿಸಿದರು. ಕಾರ್ಯಕ್ರಮದಲ್ಲಿ ಐ.ಕ್ಯೂ.ಎ.ಸಿ. ಸಂಯೋಜಕ ಡಾ.ಅರುಣ್ ಕುಮಾರ. ಪಿ., ಉಪನ್ಯಾಸಕ ಸದಾನಂದ ಸ್ವಾಮಿ ಉಪಸ್ಥಿತರಿದ್ದರು.

### ವಿದ್ಯಾರ್ಥಿಗಳ ಬೆಳವಣಿಗೆಗೆ ಸದಾ ಪ್ರೋತ್ಸಾಹ

ಮುಖ್ಯ ಅತಿಥಿ, ಸಂಸ್ಥೆಯ ಕಾರ್ಯದರ್ಶಿ ಬಿ.ಕೆ.ಚಂದ್ರಶೇಖರ್ ಮಾತನಾಡಿ, ನಮ್ಮ ಕಾಲೇಜು ಕಳೆದ ಅವಧಿಯಲ್ಲಿ ವಿಶ್ವ ವಿದ್ಯಾನಿಲಯ ಮಟ್ಟದಲ್ಲಿ ರ್‍ಯಾಂಕ್ ಗಳಿಸಿದ್ದು, ಇದು ಇತರೆ ವಿದ್ಯಾರ್ಥಿಗಳಿಗೆ ಸ್ಫೂರ್ತಿ ಆಗಲಿ. ವಿದ್ಯಾರ್ಥಿಗಳ ಬೆಳವಣಿಗೆಗೆ ಆಡಳಿತ ಮಂಡಳಿ ಸದಾ ಜೊತೆ ಇರುತ್ತದೆ ಎಂದರು.

ಪ್ರತಿ ವಿದ್ಯಾರ್ಥಿಯಲ್ಲಿ ಶಕ್ತಿ ಇರುತ್ತದೆ. ಅದನ್ನು ಅರ್ಥ ಮಾಡಿಕೊಂಡು ಶ್ರದ್ಧೆ ಮತ್ತು ಧ್ಯಾನಸ್ಥನಾಗಿ ಓದಿನಲ್ಲಿ ತೊಡಗಿಸಿಕೊಂಡರೆ ಭವಿಷ್ಯದ ಬದುಕು ಸುಂದರವಾಗಿರುತ್ತದೆ. ಕಲಾ ಮಾಧ್ಯಮದ ವಿದ್ಯಾರ್ಥಿಗಳು ಎಂದಿಗೂ ಕೂಡ ಕೀಳರಿಮೆ ಬೆಳೆಸಿಕೊಳ್ಳದೆ ಭಾಷಾ ಸಂಪತ್ತು ಬೆಳೆಸಿಕೊಂಡರೆ ಓದು ಸುಲಭ ಆಗುತ್ತದೆ. ಯುವ ಸಮುದಾಯ ಫ್ಯಾಶನ್ಗೆ ಮರುಳಾಗದೆ ಬದುಕನ್ನು ಗೆಲ್ಲುವ ಕಡೆ ಹೆಜ್ಜೆ ಇಡಿ. ಪದವಿಯಲ್ಲಿ ಮಾನವೀಯ ವಿಷಯ ಪ್ರತಿ ವಿದ್ಯಾರ್ಥಿಗೆ ಬದುಕುವ ಮೌಲ್ಯವನ್ನು ಕಲಿಸುತ್ತದೆ. ಆದ್ದರಿಂದ ಪುಸ್ತಕಗಳ ಕಡೆ ಹೆಚ್ಚು ಗಮನಹರಿಸಿ, ಗ್ರಂಥಾಲಯಗಳನ್ನು ಬಳಸಿಕೊಳ್ಳಿ. ಆ ಮೂಲಕ ಉತ್ತಮ ಸ್ಥಾನಕ್ಕೆ ಏರಲು ಸಾಧ್ಯ.

। ಜೆ.ಸಿ.ಮಾಧು ಸ್ವಾಮಿ
ಮಾಜಿ ಸಚಿವರು.


CHIKKANAYAKANAHALLI
GRADE COLLEGE
TUMKUR DIST
ನವೋದಯ ವಿದ್ಯಾ ಸಂಸ್ಥೆ (ರಿ)
ನವೋದಯ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ
ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್, ರೆಡ್‌ಕ್ರಾಸ್
ಹಾಗು ಭಾರತ್ ಸ್ಕೌಟ್ಸ್ & ಗೈಡ್ಸ್ ಚಟುವಟಿಕೆಗಳ
ಉದ್ಘಾಟನಾ ಸಮಾರಂಭ
ಸ್ಥಳ: ಸಾ.ಶಿ.ಮ ಸಭಾಂಗಣ
ದಿನಾಂಕ: 17-09-2026


ನವೋದಯ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ
ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್, ರೆಡ್‌ಕ್ರಾಸ್


ನವೋದಯ ವಿದ್ಯಾ ಸಂಸ್ಥೆ (ರಿ)
ನವೋದಯ ಪ್ರಥಮ ದರ್ಜೆ ಕಾಲೇಜು
ಚಿಕ್ಕನಾಯಕನಹಳ್ಳಿ
ಸಾಂಸ್ಕೃತಿಕ, ಕ್ರೀಡೆ, ಎನ್.ಎಸ್.ಎಸ್, ರೆಡ್‌ಕ್ರಾಸ್
ಹಾಗು ಭಾರತ್ ಸ್ಕೌಟ್ಸ್ & ಗೈಡ್ಸ್ ಚಟುವಟಿಕೆಗಳ
ಉದ್ಘಾಟನಾ ಸಮಾರಂಭ
ದಿನಾಂಕ: 17-09-2026